RNU AIR DHARWAD

# OCTOBER 13, 2025
# AKASHAVANI - DHARWAD
# PRADESH SAAMACHARA (KANNADA) 07.05 A.M

**ಮುಖ್ಯಾಂಶಗಳು**

- **ಮಕ್ಕಳ ಉತ್ತಮ ಭವಿ ್ಯ ನಿರ್ಮಿಸಲು ಶಿಕ್ಷಣಕ್ಕೆ ಆದ್ಯತೆ ನೀಡುವಂತೆ ಸಚಿವ ಶಿವಾನಂದ ಪಾಟೀಲ ಕರೆ.**
- **ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆ ಹಂಚಿಕೆ; ಫಲಾನುಭವಿಗಳ ವಂತಿಕೆ ಸಹ ರಾಜ್ಯ ಸರ್ಕಾರವೇ ಭರಿಸುವ ಮಹತ್ವದ ತೀರ್ಮಾನ.**
- **"ರಾಷ್ಟ್ರೀಯ ಮಹಿಳಾ ಆಯೋಗ ಆಪ್‌ಕೇ ದ್ವಾರ್ – ಮಹಿಳಾ ಜನ್ ಸುನ್ವಾಹಿ" ಕಾರ್ಯಕ್ರಮ ಇಂದಿನಿಂದ ಆರಂಭ.**
- **ರಾಜ್ಯದ ಮೊದಲ ಅನಾಥ ಮಾನಸಿಕ ರೋಗಿಗಳ ರಕ್ಷಣೆ ಮತ್ತು ಆರೈಕೆ ಕೇಂದ್ರ ಉಡುಪಿಯಲ್ಲಿ ಶೀಘ್ರದಲ್ಲೇ ಆರಂಭ.**

## ಈಗ ವಾರ್ತೆಗಳ ವಿವರ

**ಸಮಾಜಕ್ಕೆ ಉತ್ತಮ ನಾಗರಿಕರನ್ನು** ನೀಡುವಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದಾಗಿದೆ. ಪಾಲಕರು ಮಗುವಿನ ಉತ್ತಮ ಭವಿ ್ಯಕ್ಕಾಗಿ ಶಿಕ್ಷಣ ಕೊಡಿಸಬೇಕು ಎಂದು ಸಚಿವ ಶಿವಾನಂದ ಪಾಟೀಲ ಕರೆ ನೀಡಿದ್ದಾರೆ. ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ಪಟ್ಟಣದ ಬಳಿ ಮೌಲಾನಾ ಆಜಾದ್ ಮಾದರಿ ಶಾಲೆ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರ, ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯದ ಮಕ್ಕಳ ಶಿಕ್ಷಣಕ್ಕಾಗಿ 100 ಮೌಲಾನ ಆಜಾದ ಆಂಗ್ಲ ಶಾಲೆಗಳ ಸ್ಥಾಪನೆಗೆ ಮುಂದಾಗಿದೆ. ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಶಿಕ್ಷಕರು, ಶಾಲಾ ಕಟ್ಟಡ, ಪ್ರಯೋಗಾಲಯ ಸೇರಿ ಅಗತ್ಯ ಸೌಲಭ್ಯ ಕಲ್ಪಿಸುವುದು ಅಗತ್ಯವಾಗಿದೆ. ಮೌಲಾನಾ ಆಜಾದ್ ಶಾಲೆಯಲ್ಲಿ ಎಲ್.ಕೆ.ಜಿಯಿಂದ ಪಿಯುಸಿವರೆಗೆ ಶಿಕ್ಷಣ ನೀಡುತ್ತಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

<><><>

**ರಾಷ್ಟ್ರೀಯ ಮಹಿಳಾ ಆಯೋಗದ ವತಿಯಿಂದ** "ರಾಷ್ಟ್ರೀಯ ಮಹಿಳಾ ಆಯೋಗ ಆಪ್‌ಕೇ ದ್ವಾರ್ – ಮಹಿಳಾ ಜನ್ ಸುನ್ವಾಹಿ" ಕಾರ್ಯಕ್ರಮವನ್ನು ಇಂದಿನಿಂದ 2 ದಿನಗಳ ಕಾಲ ಆಯೋಜಿಸಲಾಗಿದೆ. ಪ್ರತಿ ದಿನ ಅಪರಾಹ್ನ 12 ಗಂಟೆಯಿಂದ ಬೆಂಗಳೂರಿನ, ಸುಧಾರಣಾ ಸಂಸ್ಥೆಗಳ ಸಂಕೀರ್ಣದ ಸಂಭ್ರಮ್ ಸಭಾಭವನದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರು ಜಿಲ್ಲೆಗಳ ವ್ಯಾಪ್ತಿಗೆ ಸಂಬಂಧಿಸಿದ ಮಹಿಳೆಯರಿಂದ ಸಲ್ಲಿಕೆಯಾದ ಮತ್ತು ಸಲ್ಲಿಸಲ್ಪಡುವ ದೂರುಗಳ ವಿಚಾರಣೆಯನ್ನು ನಡೆಸಲಾಗುವುದು. ಈ ಮೂರು ಜಿಲ್ಲೆಗಳ ವ್ಯಾಪ್ತಿಯ ಮಹಿಳೆಯರು ತಮ್ಮ ದೂರುಗಳಿದ್ದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ಮುಂದೆ ನೇರವಾಗಿ ಹಾಜರಾಗಿ ದೂರುಗಳನ್ನು ಸಲ್ಲಿಸಬಹುದಾಗಿದೆ. ಮಹಿಳೆಯರು ಈ ಅವಕಾಶದ

ಪ್ರಯೋಜನವನ್ನು ಪಡೆದುಕೊಳ್ಳುವಂತೆ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುವುದಾಗಿ ಬೆಂಗಳೂರು ನಗರ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**<><><>**

**ಮನೆಯಿಲ್ಲದೇ ರಸ್ತೆ ಬದಿಯಲ್ಲಿ ವಾಸವಿರುವ** ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಅನಾಥ ಸ್ಥಿತಿಯಲ್ಲಿರುವ ಮಾನಸಿಕ ಅಸ್ವಸ್ಥರ ರಕ್ಷಣೆ ಮತ್ತು ಆರೈಕೆಗೆ ಉಡುಪಿ ಜಿಲ್ಲಾಸ್ಪತ್ರೆಯಲ್ಲಿ ಎಮರ್ಜೆನ್ಸಿ ಕೇರ್ ಆ್ಯಂಡ್ ರಿಕವರಿ ಸೆಂಟರ್ –ಇ.ಸಿ.ಆರ್.ಸಿ. ಶೀಘ್ರವೇ ಆರಂಭವಾಗಲಿದೆ. ಇದು ಜಿಲ್ಲಾಸ್ಪತ್ರೆಯೊಂದರಲ್ಲಿ ಆರಂಭವಾಗುತ್ತಿರುವ ರಾಜ್ಯದ ಮೊದಲ ಇ.ಸಿ.ಆರ್.ಸಿ.ಕೇಂದ್ರವಾಗಿದೆ ಎಂದು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ. ರಾಜ್ಯ ಸರ್ಕಾರದ ಸಲಹೆಯಂತೆ, ಎನ್.ಜಿ.ಓ. ಸಹಯೋಗದೊಂದಿಗೆ ಇ.ಸಿ.ಆರ್.ಸಿ. ಶೀಘ್ರವೇ ಕಾರ್ಯಾರಂಭ ಮಾಡಲಿದೆ ಎಂದು ಆರೋಗ್ಯ ಇಲಾಖೆ ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ ಹೇಳಿದೆ.

**<><><>**

**ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ** ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ನಿರ್ಮಿಸಲಾದ ಒಟ್ಟು 42 ಸಾವಿರದ 346 ಮನೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನವೆಂಬರ್ 29 ರಂದು ಹುಬ್ಬಳ್ಳಿಯಲ್ಲಿ ನಡೆಯಲಿರುವ ಬೃಹತ್ ಕಾರ್ಯಕ್ರಮದಲ್ಲಿ ಹಂಚಿಕೆ ಮಾಡಲಾಗುವುದು ಎಂದು ವಸತಿ ಖಾತೆ ಸಚಿವ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಹೇಳಿದ್ದಾರೆ. ಹುಬ್ಬಳ್ಳಿ ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿಯ ನಿರ್ಮಾಣ ಹಂತದ ಮನೆಗಳು ಹಾಗೂ ಕಾರ್ಯಕ್ರಮ ಆಯೋಜಿಸುವ ಸ್ಥಳ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಈ ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿ ಆದ ಸಂದರ್ಭದಲ್ಲಿ, ಸಿದ್ದರಾಮಯ್ಯನವರು, ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ರಾಜ್ಯದಲ್ಲಿ 1 ಲಕ್ಷ 83 ಸಾವಿರ ಮನೆ ಹಾಗೂ ರಾಜೀವ್ ಗಾಂಧಿ ವಸತಿ ಯೋಜನೆಯಡಿ 47 ಸಾವಿರದ 863 ಮನೆಗಳ ನಿರ್ಮಾಣಕ್ಕೆ ಒಪ್ಪಿಗೆ ನೀಡಿದ್ದರು. ಪ್ರಸ್ತುತ ಒಂದು ಮನೆ ನಿರ್ಮಾಣಕ್ಕೆ ಏಳುವರೆ ಲಕ್ಷ ಹಣ ಬೇಕಾಗುತ್ತದೆ. ಆದರೆ, ಕೇಂದ್ರ ಸರ್ಕಾರ ಪಿಎಂ ಆವಾಸ್ ಯೋಜನೆಯಡಿ ಒಂದುವರೆ ಲಕ್ಷ ನೀಡಿ ಶೇಕಡ 18ರಷ್ಟು ಜಿಎಸ್‌ಟಿ ಹಾಕಿ ಬಡವರಿಂದ 1 ಲಕ್ಷ 38 ಸಾವಿರ ರೂಪಾಯಿ ಹಣ ವಾಪಸ್ ಪಡೆಯುತ್ತಿದೆ. ಇನ್ನು ಮನೆ ನಿರ್ಮಾಣಕ್ಕೆ ರಾಜ್ಯ ಸರ್ಕಾರದಿಂದ ಸಾಮಾನ್ಯರಿಗೆ ಒಂದುವರೆ ಲಕ್ಷ, ಪರಿಶಿಷ್ಟ ಸಮೂದಾಯದವರಿಗೆ 2 ಲಕ್ಷ ರೂಪಾಯಿ ನೀಡುತ್ತದೆ. ಹಾಗೆಯೇ 4 ಲಕ್ಷ ರೂಪಾಯಿಯವರೆಗೆ ಫಲಾನುಭವಿಗಳಿಂದ ಪಡೆಯಬೇಕಿತ್ತು. ಆದರೆ, ಬಡವರಿಗೆ ಇದು ಕಷ್ಟ–ಸಾಧ್ಯ. ಬಡವರಿಗೋಸ್ಕರ ಫಲಾನುಭವಿಗಳ ವಂತಿಕೆಯನ್ನು ಸಹ ರಾಜ್ಯ ಸರ್ಕಾರವೇ ಭರಿಸುವ ಮಹತ್ವದ ತೀರ್ಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕೈಗೊಂಡಿದ್ದಾರೆ ಎಂದರು.

**ಧ್ವನಿ – ಸಚಿವ ಜಮೀರ ( 55 ಸೆಕೆಂದುಗಳು)**

**<><><>**

**ಈಗ ವಾಣಿಜ್ಯ ಪ್ರಕಟಣೆ**
**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**
**(30 ಸೆಕೆಂದುಗಳು)**

**<><><>**

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

**<><><>**

**'ವಿಪತ್ತಿನ ಸಂದರ್ಭದಲ್ಲಿ, ಮಾನಸಿಕ ಆರೋಗ್ಯ ಸೇವೆ ಅಗತ್ಯ'** ಎಂಬಧ್ಯೇಯದೊಂದಿಗೆ, ಮನೋ ಆರೋಗ್ಯ ಮಾಸಾಚರಣೆ ಈ ತಿಂಗಳ 28 ರ ವರೆಗೆ, ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿ, ರಾಜ್ಯಾದ್ಯಂತ ಆಯೋಜಿತವಾಗಿದೆ. ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯ ಮುಖ್ಯ ಸೂಕ್ತ ಚಿಕಿತ್ಸೆ ಲಭ್ಯವಿದೆ ಎಂದು ಜನಜಾಗೃತಿ ಮೂಡಿಸಲು ಈ ಮಾಸಿಕ ಮೀಸಲಿದೆ. ಮಾನಸಿಕ ಆರೋಗ್ಯದ ಕುರಿತು ಕಾಳಜಿ, ಸಮುದಾಯ ಸಹಭಾಗಿತ್ವದಲ್ಲಿ ಆರೈಕೆ ಹಾಗೂ ವಿವಿಧ ಮನೋ ಆರೋಗ್ಯ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸಲು ಈ ಮಾಸಿಕವನ್ನು ಆಯೋಜಿಸಲಾಗಿದೆ. **ಈ ಕುರಿತು ಒಂದು ವರದಿ.**

***ಧಾರವಾಡದ ಮನೋ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ – ಡಿಮಾನ್ಸ್, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ, ಈ ತಿಂಗಳ 28ರ ವರೆಗೆ, ಮನೋ ಆರೋಗ್ಯ ಶಿಬಿರಗಳನ್ನು ಸಂಘಟಿಸಿದೆ.ವಿವಿಧ ತಾಲೂಕುಗಳ ಮನೋಚೈತನ್ಯ ಕ್ಲಿನಿಕ್, ತಾಲೂಕು ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ತಜ್ಞರೊಂದಿಗೆ ಚಿಕಿತ್ಸೆಗಾಗಿ ಸಹಾಯ, ಸಹಕಾರ ಒದಗಿಸುತ್ತಿದೆ. ಡಿಮಾನ್ಸ್ ವತಿಯಿಂದ ನಾಡಿದ್ದು 15ನೇ ತಾರೀಖು ಮಾನಸಿಕ ಆರೋಗ್ಯ ಜಾಗೃತಿ ಜಾಥಾ ಹಾಗೂ ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಟೆಲಿ ಮಾನಸ್ ಸಹಾಯವಾಣಿ ಕುರಿತು ಜನಜಾಗೃತಿ ಮೂಡಿಸಲಾಗುವುದು ಎಂದು ಡಿಮಾನ್ಸ್ ನಿರ್ದೇಶಕ ಡಾಕ್ಟರ್ ಸಿ.ಅರುಣ ಕುಮಾರ ತಿಳಿಸಿದ್ದಾರೆ.***

**ಧ್ವನಿ– ಡಾಕ್ಟರ ಅರುಣ್ ಕುಮಾರ ( 130 ಸೆಕೆಂದುಗಳು)**

**<><><>**

**ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನ ಅಮ್ಮಿನಬಾವಿ** ಗ್ರಾಮದ ಕೃಷಿಕ ಕುಟುಂಬಕ್ಕೆ ಸೇರಿದ ಗ್ರಾಮೀಣ ಪ್ರತಿಭೆ ರಿಷಿ ಕೃ ್ಣ ಬೋಂಗಾಳೆ, ಎನ್.ಡಿ.ಎ ಪರೀಕ್ಷೆಯಲ್ಲಿ 334 ನೇ ರ‍್ಯಾಂಕನೊಂದಿಗೆ ಆಯ್ಕೆಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

**ಧ್ವನಿ – ರಿಷಿ ಕೃಷ್ಣ ಬೋಂಗಾಳೆ ( 60 ಸೆಕೆಂದುಗಳು)**

**<><><>**

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು**

- **ಮಕ್ಕಳ ಉತ್ತಮ ಭವಿ ್ಯ ನಿರ್ಮಿಸಲು ಶಿಕ್ಷಣಕ್ಕೆ ಆದ್ಯತೆ ನೀಡುವಂತೆ ಸಚಿವ ಶಿವಾನಂದ ಪಾಟೀಲ ಕರೆ.**
- **ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆ ಹಂಚಿಕೆ; ಫಲಾನುಭವಿಗಳ ವಂತಿಕೆ ಸಹ ರಾಜ್ಯ ಸರ್ಕಾರವೇ ಭರಿಸುವ ಮಹತ್ವದ ತೀರ್ಮಾನ.**
- **"ರಾಷ್ಟ್ರೀಯ ಮಹಿಳಾ ಆಯೋಗ ಆಪ್‌ಕೇ ದ್ವಾರ್ – ಮಹಿಳಾ ಜನ್ ಸುನ್ವಾಹಿ" ಕಾರ್ಯಕ್ರಮ ಇಂದಿನಿಂದ ಆರಂಭ.**

- ರಾಜ್ಯದ ಮೊದಲ ಅನಾಥ ಮಾನಸಿಕ ರೋಗಿಗಳ ರಕ್ಷಣೆ ಮತ್ತು ಆರೈಕೆ ಕೇಂದ್ರ ಉಡುಪಿಯಲ್ಲಿ ಶೀಘ್ರದಲ್ಲೇ ಆರಂಭ.

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 7 ಗಂಟೆ 35 ನಿಮಿಷಕ್ಕೆ.

<><><>